**ಓ.ಎಸ್. 402/2014  ಪಿ.ಡಬ್ಲೂ-1  ಹೆಸರು - ರಾಜು**

**ಸಾಕ್ಷಿಯನ್ನು ದಿನಾಂಕಃ 20.11.2025 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ 7 ನೇ ಪ್ರತಿವಾದಿ ಪರ ಶ್ರೀ ಎಂ.ಆರ್. ವಕೀಲರಿಂದಃ**

ಪ್ರತಿವಾದಿ 2 ರಿಂದ 5 ರವರು ನನ್ನ ಸಹೋದರಿಯರಾಗಿದ್ದು ಅವರಿಗೆ ಮದುವೆಯಾಗಿ ಅಂದಾಜು 15 ವರ್ಷಗಳಾಗಿವೆ. ಮದುವೆಯ ನಂತರ ಅವರೆಲ್ಲ ಅವರ ಗಂಡನ ಮನೆಯಲ್ಲಿ ವಾಸವಿದ್ದಾರೆ ಎಂದರೆ ಸರಿ. 3 ನೇ ಪ್ರತಿವಾದಿಯವರಿಗೆ ಮದುವೆಯಾಗಿ ಅಂದಾಜು 10 ವರ್ಷಗಳಾಗಿವೆ. ಅವರು ಮದುವೆಯಾದಾಗಿನಿಂದ ಮೈಸೂರಿನಲ್ಲಿ ವಾಸವಾಗಿದ್ದಾರೆ, ಕೊಡಿಮಳೆ ಗ್ರಾಮದಲ್ಲಿ ವಾಸವಿಲ್ಲ. ಪ್ರಸ್ತುತ ನಾನು ದಾವಾ ಸ್ವತ್ತಿನ ಯಾವುದೇ ಸ್ವತ್ತಿನಲ್ಲಿ ವ್ಯವಸಾಯ ಮಾಡುತ್ತಿಲ್ಲ. ದಾವಾ ಐಟಂ ನಂ. 1 ಮತ್ತು 2 ರಲ್ಲಿ ನಾವು ವ್ಯವಸಾಯ ಮಾಡುತ್ತಿದ್ದೇವೆ ಎಂದರೆ ಸರಿಯಲ್ಲ. ವಾದ ಪತ್ರದಲ್ಲಿ ಐಟಂ ನಂ. 1 ಮತ್ತು 2, 1 ನೇ ಪ್ರತಿವಾದಿ ನನ್ನ ತಂದೆಯ ಹೆಸರಿನಲ್ಲಿದೆ ಎಂದು ತಿಳಿಸಲಾಗಿದೆ ಎಂದರೆ ಸಾಕ್ಷಿ ಎಲ್ಲಾ ಸ್ವತ್ತುಗಳು ನನ್ನ ತಂದೆಯ ಹೆಸರಿನಲ್ಲಿದೆ ಎನ್ನುವರು. ಐಟಂ ನಂ. 5 ಮತ್ತು 6 ಸ್ವತ್ತಿನಲ್ಲಿ ಯಾರು ವಾಸವಿಲ್ಲ. ಈ ಮೊದಲು ಅದರಲ್ಲಿ ನಾವೇ ವಾಸವಿದ್ದೇವು. ಐಟಂ ನಂ. 3 ಸ್ವತ್ತನ್ನು 3 ನೇ ಪ್ರತಿವಾದಿಗೆ 1 ನೇ ಪ್ರವಾದಿ ದಾನವಾಗಿ ನೀಡಿದ್ದಾರೆ ಎಂದರೆ ಸಾಕ್ಷಿ ಅದು ಒಟ್ಟು ಕುಟುಂಬದ ಆಸ್ತಿಯಾಗಿದ್ದು ಅದನ್ನು ದಾನವಾಗಿ ನೀಡಿದ್ದಾರೆ ಎನ್ನುವರು. ಸದರಿ ಸ್ವತ್ತನ್ನು 1 ನೇ ಪ್ರತಿವಾದಿ ದಿಃ 17.05.2006 ರಂದು ಗುರುಕಾರ ಮಾದಪ್ಪನ ಮಗ ಮಹದೇವಪ್ಪನವರಿಂದ ಕ್ರಯಕ್ಕೆ ಪಡೆದಿದ್ದಾರೆ ಎಂದರೆ ಸಾಕ್ಷಿ ಒಟ್ಟು ಕುಟುಂಬದಲ್ಲಿ ಇದ್ದಾಗ ಕ್ರಯಕ್ಕೆ ಪಡೆದಿದ್ದಾರೆ ಎನ್ನುವರು. ಐಟಂ ನಂ. 4 ಸ್ವತ್ತನ್ನು ದಿಃ 05.01.2009 ರಂದು ಸದರಿ ಮಹದೇವಪ್ಪನವರಿಂದಲೇ ಕ್ರಯಕ್ಕೆ ಪಡೆದಿದ್ದಾರೆ ಎಂದರೆ ಸಾಕ್ಷಿ ಒಟ್ಟು ಕುಟುಂಬದಲ್ಲಿದ್ದಾಗಲೇ ಪಡೆದಿದ್ದಾರೆ ಎನ್ನುವರು. ಆ ಸಮಯದಲ್ಲಿ 3 ನೇ ಪ್ರತಿವಾದಿ ಚಂದಕವಾಡಿ ಕೊಡಿಮಳೆ ಗ್ರಾಮ, ಚಾಮರಾಜನಗರದಲ್ಲಿ ವಾಸವಿದ್ದರು ಎಂದರೆ ಸರಿಯಲ್ಲ.

ಐಟಂ ನಂ. 3 ಮತ್ತು 4 ಅನ್ನು 3 ನೇ ಪ್ರತಿವಾದಿ 7 ನೇ ಪ್ರತಿವಾದಿಗೆ ಮಾರಾಟ ಮಾಡಿದ್ದಾರೆ ಎಂದರೆ ಸರಿ. ಅಂದಿನಿಂದ 7 ನೇ ಪ್ರತಿವಾದಿಯೇ ಸ್ವಾಧೀನದಲ್ಲಿದ್ದು ಅದು ಒಟ್ಟು ಕುಟುಂಬದ ಆಸ್ತಿ ಎಂದರೆ ಸರಿಯಲ್ಲ. ಐಟಂ ನಂ. 3 ಮತ್ತು 4 ರಲ್ಲಿ ನನಗೆ ಯಾವುದೇ ಭಾಗಾಂಶದ ಹಕ್ಕು ಇಲ್ಲ ಎಂದರೆ ಸರಿಯಲ್ಲ. ನಾನು ಮತ್ತು ನನ್ನ ಸಹೋದರಿಯರು ಮಾರಾಟ ಮಾಡಿದ ಸ್ವತ್ತನ್ನು 7 ನೇ ಪ್ರತಿವಾದಿಯಿಂದ ಕಬಳಿಸು ಸಲುವಾಗಿ ಸುಳ್ಳು ಪ್ರಕರಣ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. ನಾನು ಮತ್ತು ನನ್ನ ಸಹೋದರಿಯರು ಸುಮಾರು 20 ವರ್ಷಗಳಿಂದ ಬೇರೆ ವಾಸವಿದ್ದು, ಒಟ್ಟು ಕುಟುಂಬದಲ್ಲಿ ವಾಸವಿಲ್ಲ ಎಂದರೆ ಸರಿಯಲ್ಲ.

**ಓ.ಎಸ್. 402/2014        ಪಿ.ಡಬ್ಲೂ-1        ಹೆಸರು – ರಾಜು**

7 ನೇ ಪ್ರತಿವಾದಿಯ ಪರಿಚಯ ನನಗೆ ಗೊತ್ತಿಲ್ಲ. ದಾವಾ ಐಟಂ. 3 ಮತ್ತು 4 ಅನ್ನು 7 ನೇ ಪ್ರತಿವಾದಿಗೆ ಮಾರಾಟ ಮಾಡಿರುವ ವಿಚಾರ ನನಗೆ ಗೊತ್ತಿಲ್ಲ. ಪ್ರತಿವಾದಿ 7 ರವರು ನಮ್ಮ ಗ್ರಾಮಸ್ಥರೇ ಆಗಿದ್ದು, ಅವರ ಹಾಗೂ ಅವರ ಕುಟುಂಬದವರ ಪರಿಚಯ ನನಗೆ ಇಲ್ಲ. ಪ್ರತಿವಾದಿಗೆ ಸೇರಿದ ಸ್ವತ್ತು ಕೆ.ಐ.ಎ.ಡಿ.ಬಿ ಗೆ ಭೂಸ್ವಾಧೀನಕ್ಕೆ ಒಳಪಟ್ಟಿದೆ ಎಂದರೆ ನನಗೆ ಗೊತ್ತಿಲ್ಲ. ಅದರಿಂದ ಬಂದ ಹಣದಿಂದ ನನ್ನ ತಂದೆಯ ಸ್ವಯಾರ್ಜಿತ ಸ್ವತ್ತಾದ ಐಟಂ ನಂ. 3 ಹಾಗೂ ನನ್ನ ತಂಗಿಯ ಸ್ವಯಾರ್ಜಿತ ಸ್ವತ್ತಾದ ಐಟಂ ನಂ. 4 ಅನ್ನು ಖರೀದಿಸಿದ್ದಾರೆ ಎಂದರೆ ಸರಿಯಲ್ಲ. ನಾನು ಒಟ್ಟು ಕುಟುಂಬದ ಸದಸ್ಯನು ಅಲ್ಲ. ಸದರಿ ಸ್ವತ್ತುಗಳ ಮೇಲೆ ನನಗೆ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ**

ನನ್ನ ಉಕ್ತಲೇಖನದ ಮೇರೆಗೆ ತೆರದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.

**ಓ ಹೇ ಕೇ ಸ ಇದೆ ಎಂ ಒ**

1 **ನೇ ಹೆಚ್ಚುವರಿ ಸಿ.ಜೆ ಮತ್ತು ಪ್ರದನ್ಯಾದಂ,**

**ನಂಜನಗೂಡು**